# ಜಮಖಂಡಿ ಪರಿಸರದ ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆ

**ಶ್ರೀನಿವಾಸ ಎಸ್. ಕಟ್ಟಿಮನಿ**

ಸಹಾಯಕ ಪ್ರಾಧ್ಯಾಪಕ, ಇತಿಹಾಸ ಮತ್ತು ಪುರಾತತ್ವ ವಿಭಾಗ, ಬಿ.ಎಲ್.ಡಿ.ಇ ಸಂಸ್ಥೆಯ ವಾಣಿಜ್ಯ, ಬಿ.ಎಚ್.ಎಸ್ ಕಲೆ & ಟಿ.ಜಿ.ಪಿ ವಿಜ್ಞಾನ ಮಹಾವಿದ್ಯಾಲಯ, ಜಮಖಂಡಿ.

DOI: https://doi.org/10.5281/zenodo.17296150

## ABSTRACT:

ಜಮಖಂಡಿ ತಾಲೂಕು ಐತಿಹಾಸಿಕವಾಗಿ ಮಹತ್ವದ ಸ್ಥಳವಾಗಿದ್ದು, ತಾಲೂಕಿನಾದ್ಯಂತ ಅನೇಕ ಐತಿಹಾಸಿಕ ಕಟ್ಟಡಗಳನ್ನು ಹೊಂದಿದೆ. ದೇವಸ್ಥಾನಗಳು, ಶಾಲೆಗಳು, ಬಂಗಲೆಗಳು, ಸರ್ಕಾರಿ ಕಟ್ಟಡಗಳು ಸೇರಿದಂತೆ ಅನೇಕ ಕಟ್ಟಡಗಳಿದ್ದು, ಪ್ರತಿಯೊಂದು ವಿಶಿಷ್ಟ ಶೈಲಿಯ ವಾಸ್ತುಶಿಲ್ಪ ಹೊಂದಿವೆ. ಅಷ್ಟೊಂದು ಸೂಕ್ಷ್ಮವಲ್ಲದ ಕಟ್ಟಡ ಶೈಲಿಗಳಾದರೂ ಐತಿಹಾಸಿಕ ಕಾಲದ ವೈಶಿಷ್ಟ್ಯ ತಿಳಿಯಲು ಪ್ರಮುಖ ಆಕರಗಳಾಗುತ್ತವೆ. ನಮ್ಮ ಸುತ್ತಮುತ್ತಲಿನ ಅಂತಹ ಕೆಲವು ಪ್ರಮುಖ ಕಟ್ಟಡಗಳನ್ನು ಈ ಲೇಖನದಲ್ಲಿ ಕಾಣಬಹುದಾಗಿದೆ. ಇಂತಹ ಕಟ್ಟಡಗಳನ್ನು ಅಧ್ಯಯನದ ದೃಷ್ಟಿಯಿಂದ ಪ್ರಮುಖವಾಗಿ ಧಾರ್ಮಿಕ, ಅರಮನೆ, ಆಡಳಿತಾತ್ಮಕ, ಸಾರ್ವಜನಿಕ ಎಂದು 4 ಭಾಗಗಳಾಗಿ ವಿಭಾಗಿಸಲಾಗಿದೆ.

## KEYWORDS:

ಜಮಖಂಡಿ, ಜಿನಾಲಯ, ರಾಮತೀರ್ಥ, ಅರಮನೆ, ಸಂಸ್ಥಾನಿಕರು, ಸಂರಕ್ಷಣೆ.

**ಪೀಠಿಕೆ:**

ಪ್ರಮುಖವಾಗಿ ಕಲ್ಯಾಣದ ಚಾಲುಕ್ಯರಿಂದ ಹಿಡಿದು ಸ್ವಾತಂತ್ರ್ಯ ಹೋರಾಟ, ಆಡಳಿತ, ಸಾಮಾಜಿಕ ಸುಧಾರಣೆ, ಶಿಕ್ಷಣ, ಮೂಲಭೂತ ಸೌಕರ್ಯ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಬ್ರಿಟಿಷರು ಇದ್ದಾಗ್ಯೂ ಪ್ರಗತಿ ಸಾಧಿಸಿರುವುದು ಗಮನಿಸಬೇಕಾದ ವಿಷಯವಾಗಿದೆ. ಅನೇಕ ಸರ್ಕಾರಿ ದಾಖಲೆಗಳು, ಬರಹಗಳು, ಸಂಶೋಧನಾ ಪ್ರಬಂಧಗಳು ಜಮಖಂಡಿ ತಾಲೂಕಿನ ಬಗ್ಗೆ ಮಾಹಿತಿಯನ್ನು ಒದಗಿಸಿದರೂ ಕೂಡ ಇನ್ನೂ ಹೆಚ್ಚಿನ ಕೂಲಂಕುಷವಾದ ಸಂಶೋಧನೆ ನಡೆಯಬೇಕಿದೆ. ಅದಕ್ಕನುಗುಣವಾಗಿ ಕೆಲವು ಗಮನಾರ್ಹ ಕಟ್ಟಡಗಳ ಮಾಹಿತಿಯನ್ನು ಹಾಗೂ ಅವುಗಳ ಸಂರಕ್ಷಣೆಯ ಕುರಿತಾಗಿ ತಿಳಿಸಿಕೊಡುವುದು ಈ ಬರಹದ ಉದ್ದೇಶ.

**1. ಗೊಂಕ ಜಿನಾಲಯ ತೇರದಾಳ**

ಜಮಖಂಡಿ ತಾಲೂಕಿನಲ್ಲಿ ಒಟ್ಟು ಇದುವರೆಗೆ 36 ಶಾಸನಗಳು ಲಭ್ಯವಾಗಿದ್ದು, ಅವುಗಳಲ್ಲಿ ಕಲ್ಯಾಣ ಚಾಲುಕ್ಯರ ಕಾಲಾವಧಿಗೆ ಸಂಬಂಧಪಟ್ಟಂತೆ ಸುಮಾರು 8 ಶಾಸನಗಳು ಪ್ರಕಟಗೊಂಡಿವೆ. ಅವು ಇವರ ಆಡಳಿತಾತ್ಮಕ ಮತ್ತು ಸಾಂಸ್ಕೃತಿಕ ಸಾಧನೆಗಳನ್ನು ಸಮರ್ಥಿಸುವಲ್ಲಿ ಉಪಯುಕ್ತವಾಗಿವೆ. ಕ್ರಿ.ಶ. 1123ರ ತೇರದಾಳ ಶಾಸನ ಮೂರು ಕಾಲಘಟ್ಟಗಳಿಗೆ ಸಂಬಂಧಿಸಿದ್ದಾಗಿದೆ. ಈ ಮೊದಲೇ ಹೇಳಿದಂತೆ ಇದು ಮೊದಲನೆಯದಾಗಿ ಚಾಲುಕ್ಯರ ವಂಶಾವಳಿಯನ್ನು ತೈಲಪನಿಂದ ಆರಂಭಿಸಿ ಈ ವಂಶದಲ್ಲಿ ಜಯಸಿಂಹ ಹುಟ್ಟಿದ. ಇವನ ಮಗ ತ್ರೈಲೋಕ್ಯಮಲ್ಲನಾದ ಆಹವಮಲ್ಲ, ಇವನ ಮಗ ಪೆರ್ಮಾಡಿರಾಯ. ಇವನ ಸಾಮಂತ ಗೊಂಕಕ್ಷಿತಿಪನನ್ನು ಉಲ್ಲೇಖಿಸಿದೆ. ಶಾಸನವು ಮುಂದೆ ಚಾಲುಕ್ಯ ತ್ರಿಭುವನಮಲ್ಲನ ಆಳ್ವಿಕೆಯನ್ನು ತಿಳಿಸುತ್ತದೆ. ಈತನ ಆಳ್ವಿಕೆಯಲ್ಲಿ ಲತ್ತಲೂರ ಪುರವರಾಧೀಶ್ವರನಾದ,

ರಟ್ಟಕುಲಭೂಷಣನಾದ ಸುವರ್ಣ ಗರುಡಧ್ವಜ ಮುಂತಾದ ವಿಶೇಷಣಗಳಿಂದ ಪ್ರಖ್ಯಾತನಾದ ಮಹಾಮಂಡಳೇಶ್ವರನಾದ ಕಾರ್ತವೀರದೇವನನ್ನು ಉಲ್ಲೇಖಿಸುತ್ತದೆ. ಅಲ್ಲದೆ ತೇರದಾಳವನ್ನು ಸಾಮಂತನಾದ ಗೊಂಕದೇವನ ರಾಜಧಾನಿ ಎಂದು ಹೇಳುತ್ತದೆ.

ಕ್ರಿ.ಶ. 1154ರ ಕಲಬೀಳಗಿಯ ತೃಟಿತಶಾಸನ ಚಾಲುಕ್ಯ ಚಕ್ರವರ್ತಿ ತ್ರೈಲೋಕ್ಯಮಲ್ಲದೇವನನ್ನು ಉಲ್ಲೇಖಿಸುತ್ತದೆ. ಕೊಣ್ಣೂರಿನ ತೃಟಿತ ಚಾಲುಕ್ಯರ ಕಾಲದ ಶಾಸನ ಕಲ್ಯಾಣ ಚಾಲುಕ್ಯ ವೀರ ಸೋಮೇಶ್ವರನ ಕಾಲದ್ದಾಗಿದ್ದು, ಅವರ ವಂಶಾವಳಿಯನ್ನು ತಿಳಿಸುತ್ತದೆ. ಆದರೆ ಕಾಲದ ಉಲ್ಲೇಖವಿರುವ ಭಾಗವು ತೃಟಿತಗೊಂಡಿದೆ. ಆರಂಭದಲ್ಲಿ ಚಾಲುಕ್ಯರ ವಂಶಾವಳಿಯನ್ನು ನೀಡಿದ್ದು, ವಿಕ್ರಮಾದಿತ್ಯನಿಂದ ಆರಂಭಿಸಿ ಅವನ ಮಗ ಸೋಮೇಶ್ವರ, ಇವನ ಮಗ ಜಗದೇಕಮಲ್ಲ, ಇವನ ಮಗ ನೂರ್ಮಡಿ ತೈಲಪ, ಅವನ ಮಗ ವೀರ ಸೋಮೇಶ್ವರನನ್ನು ಹೆಸರಿಸಿದೆ. ಇವನು ಆಳುತ್ತಿದ್ದಾಗ ಸಿಂಧಕುಲದ ಬಿಜ್ಜಲ ಎಂಬುವವನು ಇವನ ಸಾಮಂತನಾಗಿದ್ದ, ದಂಡನಾಯಕನಾಗಿ ತೇಜಿಮಯ್ಯ ಎಂಬುವವನಿದ್ದ. ಇವನು ಗೌತಮ ಗೋತ್ರಕ್ಕೆ ಸೇರಿದ್ದು, ನಂನಪಯ್ಯ ದಂಡನಾಥ ಎಂಬುವವನ ಪುತ್ರ ತೇಜಚಾಮೂಪನ ಮಗ ಬಾಯಿಲಚಾಮೂಪ. ಇವನ ಪತ್ನಿ ಭಾಗಲದೇವಿ, ಇವರ ಮಗನೇ ಚಿಕ್ಕ ತೇಜದಂಢಾದೀಪ ಎಂದು ಉಲ್ಲೇಖಿಸುತ್ತದೆ. ಕೊಣ್ಣೂರಿನ ಮತ್ತೊಂದು ಶಾಸನ ವೀರಸೋಮೇಶ್ವರ ದೇವನ ಆಳ್ವಿಕೆಯ ನಾಲ್ಕನೇ ವರ್ಷವನ್ನು ಉಲ್ಲೇಖಿಸುವ ಶಾಸನವು ಕ್ರಿ.ಶ. 1185ರ ಕಾಲಘಟ್ಟಕ್ಕೆ ಸರಿಹೊಂದುತ್ತದೆ. ಕೊಣಿಗನೂರಿನ ದೇವಾಲಯದ ಪೂಜೆ ಪುನಸ್ಕಾರಗಳಿಗಾಗಿ ಅಯ್ಯಾವೊಳೆ 500ರ ಸಂಘದವರು ದಾನ ಮಾಡಿದುದನ್ನು ಉಲ್ಲೇಖಿಸಲಾಗಿದೆ. ಜಮಖಂಡಿಯ 400 ಮಹಾಜನರನ್ನು ಸತ್ವನಮಸ್ಯ ಅಗ್ರಹಾರದವರೆಂದು ವರ್ಣಿಸಲಾಗಿದೆ. ಜೊತೆಗೆ ಸೆಟ್ಟಿಯರ, ಗಾವುಂಡರ ಹೆಸರುಗಳನ್ನು ಶಾಸನವು ಉಲ್ಲೇಖಿಸುತ್ತದೆ. ಶಾಸನದ ಬಹುಭಾಗ ತೃಟಿತವಾಗಿರುವುದರಿಂದ ವಿವರಗಳು ಸ್ಪಷ್ಟವಾಗಿಲ್ಲ. ಕ್ರಿ.ಶ. 1188ರ ಶಾಸನ ಭತ್ತದ ಮೇಲಿನ ಆದಾಯ ತೆರಿಗೆಯನ್ನು ದಾನವಾಗಿ ಬಿಟ್ಟಿದನ್ನು ಉಲ್ಲೇಖಿಸಿದೆ. ಶಾಸನದ ಭಾಗಗಳು ತೃಟಿತಗೊಂಡಿರುವುದರಿಂದ ವಿವರಗಳು ಲಭ್ಯವಿಲ್ಲ. ಕ್ರಿ.ಶ. 1017ರ ಆಲ್ಗೂರು ಶಾಸನ ಕಡಿತವೆರ್ಗ್ಗೆಡೆ ಪೊಳಲಮಯ್ಯನ ಅಣತಿಯಂತೆ ವೈಜಪಯ್ಯ, ಸೆಟ್ಟಿಮಾಚಯ್ಯ ಮತ್ತು ಕಲಿಯಮಯ್ಯ ಇವರು ನಾಲ್ವರು ಸೇರಿ ಶಿಲಾಸ್ತಂಭವನ್ನು ಮಾಡಿಸಿದಂತೆಯೂ ಇದಕ್ಕಾಗಿ ತೆರಿಗೆಯನ್ನು ಬಿಟ್ಟಂತೆಯೂ ತಿಳಿಸುತ್ತದೆ.

ಒಟ್ಟಾರೆ ಗೊಂಕ ಜಿನಾಲಯವು ಜಮಖಂಡಿ ತಾಲೂಕಿನಲ್ಲಿ ಉಳಿದುಕೊಂಡು ಬಂದಿರುವ ಐತಿಹಾಸಿಕ ಪ್ರಾಚೀನ ಸ್ಮಾರಕಗಳಲ್ಲೊಂದಾಗಿದ್ದು, ಇಂದು ಸಾಕಷ್ಟು ಬದಲಾವಣೆಗೆ ಒಳಪಟ್ಟಿದೆ. ಅದರ ಐತಿಹಾಸಿಕತೆ ಮತ್ತು ಮಹತ್ವವನ್ನು ಪರಿಗಣಿಸಿ ಮೂಲ ಸ್ವರೂಪದಲ್ಲಿಯೇ ಅದನ್ನು ಸಂರಕ್ಷಿಸಬೇಕಾದ ಅವಶ್ಯಕತೆಯಿದೆ.

**2. ಪರಶುರಾಮೇಶ್ವರ ದೇವಾಲಯ**

ಜಮಖಂಡಿ ಸಂಸ್ಥಾನದ ಪ್ರಥಮ ದೊರೆಯಾದ ರಾಮಚಂದ್ರ ಅವರ ಮಗ ಗೋಪಾಲರಾವ್ ಪಟವರ್ಧನ ತಮ್ಮ ತಂದೆಯವರ ನೆನಪಿಗಾಗಿ ಸರ್ಕಾರಿ ಕಚೇರಿಯ ಆವರಣದಲ್ಲಿ 1818 ರಲ್ಲಿ ಒಂದು ಶೈವ ದೇವಾಲಯವನ್ನು ಸ್ಥಾಪಿಸಿದರು. ಈ ದೇವಾಲಯಕ್ಕೆ ರಾಮಚಂದ್ರ ಪರಶುರಾಮೇಶ್ವರ ದೇವಾಲಯವೆಂದು ಹೆಸರಿಟ್ಟರು, ಆದರೆ ಇಂದು ಇದಕ್ಕೆ ಪರಶುರಾಮೇಶ್ವರ ದೇವಾಲಯ ಎಂದು ಕರೆಯುತ್ತಾರೆ. ಗೋಪಾಲರಾವ್ ಪಟವರ್ಧನ ಅವರು ಈ ದೇವಾಲಯಕ್ಕೆ 20 ಎಕರೆ ಜಮೀನನ್ನು ದತ್ತಿಯಾಗಿ ನೀಡಿದ್ದಾರೆ. ಈ ದತ್ತಿ

ನೀಡಿದ ಭೂಮಿಗಳು ಇಂದಿನ ಕಡಕೊಳ ಮತ್ತು ಜಮಖಂಡಿಯ ಗ್ರಾಮೀಣ ಭಾಗದಲ್ಲಿದೆ. ಸರ್ಕಾರ ಇಂದಿಗೂ ಈ ದೇವಸ್ಥಾನಕ್ಕೆ ಸಹಾಯಧನ ನೀಡುತ್ತಿದೆ.

ಈ ದೇವಾಲಯವು ಸಾಕಷ್ಟು ಜೀರ್ಣೋದ್ಧಾರವಾಗಿದ್ದು, ಬಹುಪಾಲು ಮೂಲ ಸ್ವರೂಪವನ್ನು ಕಳೆದುಕೊಂಡಿದೆ, ಅದರ ಇತಿಹಾಸ ಹಾಗೂ ಧಾರ್ಮಿಕ ಮಹತ್ವದ ದೃಷ್ಟಿಯಿಂದ ಸಂರಕ್ಷಿಸಬೇಕಾದದ್ದು ಇಂದಿನ ಆದ್ಯ ಕರ್ತವ್ಯವಾಗಿದೆ.

**3. ಉಮಾರಾಮೇಶ್ವರ ದೇವಸ್ಥಾನ**

ಗೋಪಾಲರಾವ್ ಅವರ ದತ್ತು ಪುತ್ರ ರಾಮಚಂದ್ರರಾವ್ ಅವರು ಈ ದೇವಾಲಯವನ್ನು ನಿರ್ಮಿಸಿದರು. 1857ರ ದಂಗೆಯ ಆರಂಭದ ನಂತರ ಅದರ ಪ್ರಭಾವ ಜಮಖಂಡಿ ಸಂಸ್ಥಾನದ ಮೇಲೆಯೂ ಬೀರಿತು. ಇಲ್ಲಿ ನಡೆಯುತ್ತಿದ್ದ ಚಟುವಟಿಕೆಗಳ ಹಿಂದೆ ಸಂಸ್ಥಾನಿಕರ ಕೈವಾಡ ಇದ್ದಿರಬಹುದು ಎಂಬ ಗುಮಾನಿಯಿಂದ ಅರಸನ ಬಂಧನಕ್ಕೆ ಆದೇಶವಿತ್ತರು. ಈ ಬಂಧನದ ನಂತರ ಅವರನ್ನು ಬೆಳಗಾವಿಯ ಹಿಂಡಲಗ ಜೈಲಿನಲ್ಲಿ ಇರಿಸಿದರು. ರಾಜರ ಬಂಧನದಿಂದ ನೊಂದ ಛಟ್ಟುಸಿಂಗ್ ಎಂಬ ರಜಪೂತ್ ಸರದಾರನು ಬಂಡಾಯಕ್ಕೆ ಸ್ವತಃ ತಾನೇ ಕಾರಣ ಎಂದು ಬಂಧನಕ್ಕೊಳಗಾಗಿ ಗಲ್ಲು ಶಿಕ್ಷೆಗೆ ಗುರಿಯಾದ. ನಂತರ 1858–59 ರಲ್ಲಿ ರಾಮಚಂದ್ರರಾವ್ ಅವರು ನಿರಪರಾಧಿ ಎಂದು ಬಿಡುಗಡೆಯಾದರು. ಬಿಡುಗಡೆಯ ನಂತರ ಜಮಖಂಡಿಗೆ ಬಂದು ತಾವು ಮೊದಲಿದ್ದ ಅರಮನೆಯನ್ನು ಬಿಟ್ಟು ನಗರದ ಹೊರಗಿದ್ದ ರಾಮತೀರ್ಥದಲ್ಲಿ ಭವ್ಯವಾದ ಅರಮನೆಯನ್ನು ಕಟ್ಟಿಸಿ ಅಲ್ಲಿಯೇ ವಾಸ ಮಾಡಿದರು. ಈ ಅರಮನೆಗೆ ರಾಮಚಂದ್ರ ಪ್ರಸಾದ್ ಎಂದು ಹೆಸರಿಸಿದರು. ಇದಾದ ನಂತರ ಈ ದೇವಾಲಯದ ನಿರ್ಮಾಣವಾಯಿತು. ಶ್ರಾವಣ ಮಾಸ ಮತ್ತು ಗಣೇಶ ಹಬ್ಬದಲ್ಲಿ ಈ ದೇವಸ್ಥಾನದ ಉತ್ಸವ ನಡೆಯುತ್ತದೆ. ಅಂದಿನ ಕಾಲದಲ್ಲಿ ರಾಮತೀರ್ಥ ಅರಮನೆಯಿಂದ ಅರಸರು ಸಾಂಸ್ಕೃತಿಕ ಪೋಷಾಕಿನಲ್ಲಿ ಉಮಾರಾಮೇಶ್ವರ ದೇವಸ್ಥಾನಕ್ಕೆ ಬರುತ್ತಿದ್ದರು.

ಇಂದು ಈ ದೇವಾಲಯ ಸುಸ್ಥಿತಿಯಲ್ಲಿದ್ದರೂ ಸಹ ಇನ್ನೂ ಹೆಚ್ಚಿನ ಸಂರಕ್ಷಣೆಯ ಅವಶ್ಯಕತೆಯಿದೆ. ಅಲ್ಲದೇ ಸಾರ್ವಜನಿಕರಿಗೆ ಈ ದೇವಾಲಯದ ಇತಿಹಾಸವನ್ನು ತಿಳಿಸುವ ಪ್ರಯತ್ನವಾಗಬೇಕಾಗಿದೆ.

**4. ಸಯ್ಯದ್ ಅಬುಬಕರ್ ದರ್ಗಾ**

"ಸೈಯದ್ ಅಬುಕರ್ ಖಾದ್ರಿ" ಎಂಬ ಸೂಫಿ ಸಂತರು ಹಿಜರಿ ಶಕೆ 625 ರಲ್ಲಿ ಮದಿನಾ ಪಟ್ಟಣದಿಂದ ಗುಲ್ಬರ್ಗಕ್ಕೆ ಬಂದು ಅಲ್ಲಿಂದ ಮುಂದೆ ವಿಜಯಪುರಕ್ಕೆ ಆಗಮಿಸಿ ನೆಲೆಸಿದರು. ಮುಂದೆ ಸುಮಾರು 13ನೇ ಶತಮಾನದ ಕೊನೆಗೆ ಜಮಖಂಡಿಗೆ ಬಂದು ವಾಸಿಸಹತ್ತಿದರು. ಇವರು ಮಹಾಪುರುಷರು ಸಿದ್ಧಿಪುರುಷರು ಆಗಿದ್ದರು. ಇವರು ಮುಂದೆ ಹಿಜರಿ ಶಕೆ 750 ರಲ್ಲಿ ನಿಧನ ಹೊಂದಿದರು. ಇವರ ಸಮಾಧಿಯೇ ಇಂದು ನಗರದಲ್ಲಿರುವ ಸೈಯದ್ ಅಬುಕರ್ ಖಾದ್ರಿ ದರ್ಗಾ. ರೂಢಿಯಲ್ಲಿ ಇದನ್ನು ಅಬೂಬ್ಕರ್ ದರ್ಗಾ ಎಂದು ಕರೆಯುತ್ತಾರೆ. ಇದೊಂದು ಜಾಗೃತ ಸ್ಥಳವಾಗಿದ್ದು, ಎಲ್ಲಾ ಧರ್ಮಿಯರು ಅತ್ಯಂತ ಭಕ್ತಿಯಿಂದ ಈ ದರ್ಗಾಕ್ಕೆ ಭೇಟಿ ನೀಡುತ್ತಾರೆ. ಪಟವರ್ಧನ ಸಂಬಂಧಿಕರಾದ ಯಶವಂತ ಗುಂಡೂರಾವ್ ಅವರು ಈ ದರ್ಗಾದ ಮುಂದಿನ ಭವ್ಯ ಕಟ್ಟಡ ನಿರ್ಮಿಸಿ ತಮ್ಮ ಭಕ್ತಿಯನ್ನು ಸಲ್ಲಿಸಿದರು. ಪ್ರತಿವರ್ಷ ಈ ದರ್ಗಾದ ಉರುಸನ್ನು ಸಕಲ ಧರ್ಮಿಯರು ಸಡಗರದಿಂದ ಆಚರಿಸುತ್ತಾರೆ. ಇದು ವಸಾಹತು ಕಾಲದ ಧಾರ್ಮಿಕ ಐಕ್ಯತೆಯನ್ನು ಸೂಚಿಸುತ್ತದೆ.

ಈ ದರ್ಗಾ ಅತ್ಯುತ್ತಮ ಸ್ಥಿತಿಯಲ್ಲಿದ್ದು, ಮೂಲ ಸೌಲಭ್ಯ ಹಾಗೂ ಅದರ

ಇತಿಹಾಸವನ್ನು ತಿಳಿಸುವ ಪ್ರಯತ್ನವಾಗಬೇಕಾಗಿದೆ.

**5. ಪಟವರ್ಧನ್ ಅರಮನೆ**

ಜಮಖಂಡಿಯು ರಾಮಾಯಣ ಕಾಲದ ದಂಡಕಾರಣ್ಯದ ಭಾಗವಾಗಿತ್ತು. ಈಗಿನ ಅರಮನೆ ಭಾಗದಲ್ಲಿ ಪೂರ್ವಕ್ಕೆ ಶ್ರೀರಾಮಚಂದ್ರ ಈಶ್ವರ ಮೂರ್ತಿಯನ್ನು ಪ್ರತಿಷ್ಠಾಪಿಸಿ ಪೂಜಿಸಿದ್ದು ಪುರಾಣದಲ್ಲಿ ಉಲ್ಲೇಖವಿದೆ. ಅಂದಿನಿಂದ ಈ ಕ್ಷೇತ್ರಕ್ಕೆ ರಾಮತೀರ್ಥ ಎಂದು ಹೆಸರು ಬಂದಿತೆಂದು ಹಿರಿಯರು ಹೇಳುತ್ತಾರೆ. ಮರಾಠಿಗರಾದ ಪೇಳ್ವೆಗಳ ಆಡಳಿತದಲ್ಲಿ ಅಂದರೆ 17ನೇ ಶತಮಾನದ ಮಧ್ಯಭಾಗದಲ್ಲಿ ಜಮಖಂಡಿಯು ಪಟವರ್ಧನ ಮಾಂಡಲಿಕರ ಆಡಳಿತಕ್ಕೆ ಒಳಪಟ್ಟಿತು. 1766 ಸುಮಾರಿಗೆ ಪರಶುರಾಮ ಬಾವು ಮೊದಲ ಸಂಸ್ಥಾನಿಕರಾಗಿ ಕಾರ್ಯ ನಿರ್ವಹಿಸಿದರು. ಈ ಸಂಸ್ಥಾನಿಕರ ಕಾಲದಲ್ಲಿ ರಾಮಚಂದ್ರ ಅಪ್ಪಾಸಾಹೇಬ ಪಟವರ್ಧನ ಮಹಾರಾಜರು ಸುದೀರ್ಘ 44 ವರ್ಷಗಳ ಆಡಳಿತ ನಡೆಸಿ ಜಮಖಂಡಿಯ ಸಮಗ್ರ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಸುಮಾರು 200 ಎಕರೆ ವಿಸ್ತೀರ್ಣದಲ್ಲಿ ಈ ಅರಮನೆಯಿದೆ. ನಿರಂತರ ಕುಡಿಯುವ ನೀರಿನ ವ್ಯವಸ್ಥೆಯು ಅಂದಿನ ಕಾಲದಲ್ಲೇ ಅಳವಡಿಸಿರುವುದು ಗಮನಾರ್ಹ ವಿಷಯವಾಗಿದೆ.

ಇಷ್ಟೆಲ್ಲಾ ವೈಭವಿತವಾಗಿದ್ದ ಅರಮನೆಯು ಸರಿಯಾದ ನಿರ್ವಹಣೆಯಿಲ್ಲದೆ ಅನೈತಿಕ ಚಟುವಟಿಕೆಗಳ ತಾಣವಾಗಿ ಮಾರ್ಪಾಡಾಗಿರುವುದು ಬೇಸರದ ಸಂಗತಿಯಾಗಿದೆ. ಸರ್ಕಾರದ ಜೊತೆಗೆ ಇತಿಹಾಸ ತಿಳಿದವರು ಇಂತಹ ಸ್ಮಾರಕಗಳ ಅವಶ್ಯಕತೆಗಳನ್ನು ಜನರಿಗೆ ತಿಳಿಸಿ ಸಂರಕ್ಷಿಸಬೇಕಾಗಿರುವುದು ಅತ್ಯಂತ ಅವಶ್ಯಕವಾಗಿದೆ.

**6. ಪಿ.ಬಿ. ಹೈಸ್ಕೂಲ್**

ರಾಮಚಂದ್ರ ರಾವ್ ಅವರು ಶಿಕ್ಷಣ ಪ್ರೇಮಿಗಳಾಗಿದ್ದರು. ಪ್ರಜೆಗಳು ಸುಶಿಕ್ಷಿತರಾಗಲಿ ಎಂಬ ಕಾರಣಕ್ಕೆ 1888 ರಲ್ಲಿ ಮುತ್ತಜ್ಜ ಪರಶುರಾಮ ಭಾವು ಅವರ ಹೆಸರಿನಲ್ಲಿ ಹೈಸ್ಕೂಲ್ ಒಂದನ್ನು ಆರಂಭಿಸಿದರು. ಈ ಹೈಸ್ಕೂಲ್ ನಿರ್ಮಾಣಕ್ಕೆ ಆ ಕಾಲದಲ್ಲಿ 1 ಲಕ್ಷದ 20 ಸಾವಿರ ರೂಪಾಯಿ ಖರ್ಚಾಗಿತ್ತು. 1988 ರಲ್ಲಿ ಶತಮಾನೋತ್ಸವ ಕಂಡ ಈ ಹೈಸ್ಕೂಲು ಉತ್ತಮ ಗುಣಮಟ್ಟದ ಶಿಕ್ಷಣಕ್ಕೆ ಹೆಸರಾಗಿದೆ. ಈ ಶಾಲೆಯಲ್ಲಿ ವಿದ್ಯಾಭ್ಯಾಸ ಮುಗಿಸಿದ ಎಷ್ಟೋ ವಿದ್ಯಾರ್ಥಿಗಳು ಇಂದು ಉನ್ನತ ಹುದ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಸರ್ಕಾರದಿಂದ ಸಾಕಷ್ಟು ಸೌಲಭ್ಯಗಳಿದ್ದರೂ ಸಹ ಮೂಲಭೂತ ಸೌಕರ್ಯದ ಕೊರತೆಯಿಂದಾಗಿ ಇಂದು ವಿದ್ಯಾರ್ಥಿಗಳ ಸಂಖ್ಯೆ ಕುಸಿಯುತ್ತಿದೆ. ಇದಕ್ಕಾಗಿ ಇತಿಹಾಸ ಪ್ರೇಮಿಗಳು, ಶಿಕ್ಷಣ ಪ್ರೇಮಿಗಳು ಅವುಗಳನ್ನು ಒದಗಿಸುವ ಪ್ರಯತ್ನಗಳು ನಡೆಯಬೇಕಾಗಿದೆ.

**7. ರಮಾಬಾಯಿ ವಾಚನಾಲಯ**

ಪರಶುರಾಮ ಭಾವು ಅವರು ಈ ಮೊದಲೇ ಹೇಳಿದಂತೆ ಶಿಕ್ಷಣ ಪ್ರೇಮಿಗಳಾಗಿದ್ದು, ಪ್ರಜೆಗಳು ಓದಲು ಸಹಾಯಕವಾಗುವಂತೆ ಪ್ರಥಮ ಮಹಾರಾಣಿ ಶ್ರೀಮತಿ ಸೌಭಾಗ್ಯವತಿ ರಮಾಬಾಯಿ ಅವರ ಸ್ಮರಣಾರ್ಥವಾಗಿ 1905 ರಲ್ಲಿ ಗ್ರಂಥಾಲಯ ಒಂದನ್ನು ಸ್ಥಾಪಿಸಿದರು. ತಮ್ಮದೇಯಾದ ವಿದ್ಯಾಭಿವೃದ್ಧಿ ವರ್ಧಕ ಮಂಡಳಿಯ ಆಶ್ರಯದಲ್ಲಿ ಈ ಗ್ರಂಥಾಲಯವಿತ್ತು. ಇದಲ್ಲದೆ "ವಾಚನ ಮಂದಿರ" ಎಂಬ ಚಿಕ್ಕ ಗ್ರಂಥಾಲಯವು ಶಂಕರ ಬಾಲಚಂದ್ರ ಎಂಬ ಕಾರಭಾರಿಯ ಸತತ ಪ್ರಯತ್ನದಿಂದ ಸ್ಥಾಪನೆಯಾಯಿತು. ಮುಂದೆ ಪರಶುರಾಮ ಭಾವು ಅವರು ಈ ಎರಡು ಗ್ರಂಥಾಲಯ ಒಟ್ಟುಗೂಡಿಸಿ ಒಂದು ದೊಡ್ಡ ವಾಚನಾಲಯವನ್ನಾಗಿ

ಮಾಡಿದರು. ಈ ಗ್ರಂಥಾಲಯಕ್ಕೆಂದು ಪಿ. ಬಿ. ಹೈಸ್ಕೂಲ್ ಎದುರು 1900 ರಲ್ಲಿ ಒಂದು ಕಟ್ಟಡವನ್ನು ನಿರ್ಮಿಸಲಾಯಿತು. 1923 ರಲ್ಲಿ ಈ ವಾಚನಾಲಯ ಪ್ರಥಮ ದರ್ಜೆಯ ವಾಚನಾಲಯ ಎಂದು ಮಾನ್ಯತೆ ಪಡೆಯಿತು. ಈ ಗ್ರಂಥಾಲಯದಲ್ಲಿ ಇಂಗ್ಲೀಷ್, ಕನ್ನಡ, ಹಿಂದಿ, ಮರಾಠಿ, ಸಂಸ್ಕೃತ, ಉರ್ದು ಭಾಷೆಯ ಮಹತ್ವದ ಗ್ರಂಥಗಳನ್ನು ಹೊಂದಿದ್ದು, 1949ರಲ್ಲಿ ಈ ಗ್ರಂಥಾಲಯವನ್ನು ಧಾರವಾಡ ಪ್ರಾದೇಶಿಕ ಗ್ರಂಥಾಲಯಕ್ಕೆ ವರ್ಗಾಯಿಸಲಾಗಿದೆ.

ಐತಿಹಾಸಿಕ ಮಹತ್ವವನ್ನು ಹೊಂದಿರುವ ಈ ಕಟ್ಟಡ ಇಂದು ಅಲ್ಪ-ಸ್ವಲ್ಪ ಸುಧಾರಣೆಯಾಗಿದೆಯಾದರೂ ಓದುಗರ ಸಂಖ್ಯೆ ದಿನದಿಂದ ದಿನಕ್ಕೆ ಅಧಿಕವಾಗುತ್ತಿದ್ದು, ಕಟ್ಟಡದಲ್ಲಿ ಸ್ಥಳಾವಕಾಶದ ಕೊರತೆಯಾಗುತ್ತಿದೆ. ಸರ್ಕಾರದಿಂದ ಸೌಲಭ್ಯ ದೊರೆಯಬೇಕಾಗಿದೆ.

**8. ಗೌವರ್ನರ್ ಬಂಗ್ಲೆ (ಪೋಲೋ ಪ್ಯಾಲೇಸ್)**

ಪರಶುರಾಮ ಭಾವು ಅವರು ವಿವಿಧ ದೇಶಗಳಿಗೆ ಭೇಟಿ ನೀಡಿ ಅಲ್ಲಿನ ವಿವಿಧ ರೀತಿಯ ಕಟ್ಟಡಗಳಿಂದ ಪ್ರಭಾವಿತರಾಗಿ ಅಂತಹ ಕಟ್ಟಡ ನಮ್ಮಲ್ಲಿಯೂ ಇರಬೇಕೆಂಬುದು ಅವರ ಆಶಯವಾಗಿತ್ತು. ಅದೇ ರೀತಿಯ ಯುರೋಪಿಯನ್ ಮಾದರಿಯ ಕಟ್ಟಡಗಳನ್ನು ನಿರ್ಮಿಸಿದ್ದಾರೆ. ಅದರಲ್ಲಿ ಇಂದಿನ ಬಿ.ಎಲ್.ಡಿ.ಇ. ನಿರ್ವಹಣೆಯಲ್ಲಿರುವ ಪೋಲೋ ಪ್ಯಾಲೇಸ್ ಕೂಡ ಒಂದು. ಇದನ್ನು 1906 ರಲ್ಲಿ ನಿರ್ಮಿಸಲಾಗಿದೆ. ಇದನ್ನು ಗವರ್ನರ್ ಬಂಗ್ಲೆ ಎಂದು ಕರೆಯಲು ಕಾರಣವೂ ಇದೆ. ಸಂಸ್ಥಾನಿಕರ ಕಾಲದಲ್ಲಿ ಮುಂಬೈ ಪ್ರಾಂತ್ಯದ ಗವರ್ನರ್‌ಗಳು, ಅವರ ಸಿಬ್ಬಂದಿ ವರ್ಗ ಮಾತ್ರವಲ್ಲದೇ ಆಡಳಿತ ಅಧಿಕಾರಿಗಳು ಸಂದರ್ಶನ ನೀಡುತ್ತಿದ್ದರು. ಅವರ ವಾಸ್ತವ್ಯಕ್ಕಾಗಿ ಈ ಕಟ್ಟಡವನ್ನು ನಿರ್ಮಿಸಿದರು. ಪರಶುರಾಮ ಭಾವು ಅವರ ಆಡಳಿತ ಸಂದರ್ಭದಲ್ಲಿ ಮುಂಬೈನ ಗವರ್ನರ್‌ಗಳಾಗಿದ್ದ ಲಾರ್ಡ್ ವಿಲ್ಲಿಂಗ್ ಟನ್ ಮತ್ತು ಲಾರ್ಡ್ ಲಾಯಿಡ್ ಅವರು ಸಂಸ್ಥಾನಕ್ಕೆ ಭೇಟಿ ನೀಡಿದ್ದರು.

ಇಂದು ಈ ಕಟ್ಟಡ ಖಾಸಗಿಯವರ ಸುಪರ್ದಿಯಲ್ಲಿದ್ದರೂ ಸಹ ಕಟ್ಟಡದ ನಿರ್ವಹಣೆಯು ಅಷ್ಟೊಂದು ಉತ್ತಮವಾಗಿಲ್ಲ. ಐತಿಹಾಸಿಕ ಕಟ್ಟಡವಾಗಿರುವುದರಿಂದ ಇನ್ನೂ ಉತ್ತಮ ನಿರ್ವಹಣೆಯ ಅಗತ್ಯವಿದೆ.

**9. 2ನೇ ನಂಬರ್ ಮರಾಠಿ ಶಾಲೆ**

ಸಂಸ್ಥಾನಿಕರ ಆಡಳಿತ ಭಾಷೆ ಮರಾಠಿ ಆಗಿದ್ದರಿಂದ ಪ್ರಜೆಗಳಿಗೆ ಮರಾಠಿ ಭಾಷೆಯಲ್ಲಿಯೇ ಶಿಕ್ಷಣ ನೀಡಲಾಗುತ್ತಿತ್ತು. ಇಂದಿನ ಶಿವಾಜಿ ವೃತ್ತದ ಹಿಂದೆ ಇರುವ ಶಾಲೆಯೇ ಅಂದಿನ 2ನೇ ನಂಬರ್ ಮರಾಠಿ ಶಾಲೆ. ಈ ಶಾಲೆಯನ್ನು 1870 ರಲ್ಲಿ ರಾಮಚಂದ್ರರಾವ್ ಅಪ್ಪಾಸಾಹೇಬ್ ಅವರು ನಿರ್ಮಿಸಿದರು. 1948 ರಲ್ಲಿ ಸಂಸ್ಥಾನವು ಭಾರತದ ಒಕ್ಕೂಟಕ್ಕೆ ವಿಲೀನವಾದ ನಂತರ ಕರ್ನಾಟಕ ಏಕೀಕರಣ ಹೊಂದಿ ಆಡಳಿತ ಭಾಷೆ ಕನ್ನಡವಾದ್ದರಿಂದ ಕನ್ನಡ ಶಾಲೆಯಾಗಿ ಬದಲಾವಣೆಯಾಗಿದೆ. ಪ್ರಸ್ತುತ ಈ ಶಾಲೆಯಲ್ಲಿ 1 ರಿಂದ 7 ನೇ ತರಗತಿಯವರೆಗೆ ಶಿಕ್ಷಣ ನೀಡಲಾಗುತ್ತಿದೆ.

ಐತಿಹಾಸಿಕ ಹಿನ್ನೆಲೆಯನ್ನು ಹೊಂದಿರುವ ಈ ಶಾಲೆಗೆ ಇಂದು ಆಟದ ಮೈದಾನದ ಕೊರತೆ ಹಾಗೂ ಕಟ್ಟಡ ಶಿಥಿಲಾವಸ್ಥೆಯನ್ನು ತಲುಪಿರುವುದರಿಂದ ರಕ್ಷಣೆಯ ಅವಶ್ಯಕತೆಯಿದೆ.

**10. ದರ್ಬಾರ್ ಹಾಲ್**

ಸಂಸ್ಥಾನಿಕರಾದ ಪರಶುರಾಮ ಭಾವು ಪಟವರ್ಧನ ಅವರು ತಮ್ಮ ಪಟ್ಟಾಭಿಷೇಕ ಸಮಾರಂಭವನ್ನು ಆಚರಿಸುವ ಸಲುವಾಗಿ 1903 ರಲ್ಲಿ ಈ ಕಟ್ಟಡವನ್ನು ನಿರ್ಮಿಸಿದರು.

ಪ್ರತಿವರ್ಷ ಪಟ್ಟಾಭಿಷೇಕದ ವಾರ್ಷಿಕೋತ್ಸವವನ್ನು ಇಲ್ಲಿಯೇ ಆಚರಿಸಿಕೊಳ್ಳುತ್ತಿದ್ದರು. ಈ ಸಮಾರಂಭದಲ್ಲಿ ಅಕ್ಕ-ಪಕ್ಕದ ದೊರೆಗಳನ್ನು, ಆಡಳಿತ ಸಿಬ್ಬಂದಿ ವರ್ಗದವರನ್ನು ಆಹ್ವಾನಿಸುತ್ತಿದ್ದರು. ಪ್ರಸ್ತುತ ಈ ಕಟ್ಟಡವೂ ಸಹ ಬಿ.ಎಲ್.ಡಿ.ಇ ಶಿಕ್ಷಣ ಸಂಸ್ಥೆಯ ಅಧೀನದಲ್ಲಿಯೇ ನಿರ್ವಹಣೆ ಮಾಡಲಾಗುತ್ತಿದೆ. ಈ ಶಿಕ್ಷಣ ಸಂಸ್ಥೆಯ ಪ್ರಮುಖ ಕಾರ್ಯಕ್ರಮಗಳು ಇಲ್ಲಿಯೇ ನಡೆಯುತ್ತವೆ. ಕಾರ್ಯಕ್ರಮದ ಸಂದರ್ಭ ಬರುವ ಅತಿಥಿಗಳು ಈ ಕಟ್ಟಡದ ಸೌಂದರ್ಯವನ್ನು ಕಂಡು ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಾರೆ. ಕಟ್ಟಡ ವ್ಯವಸ್ಥಿತ ರೀತಿಯಲ್ಲಿದ್ದು, ಮುಂದೆ ವಿಶಾಲ ಮೈದಾನವನ್ನು ಹೊಂದಿದೆ. ಈ ಕಟ್ಟಡ ಸುವ್ಯವಸ್ಥಿತ ರೀತಿಯಲ್ಲಿದ್ದರೂ ಸಹ ಸಾರ್ವಜನಿಕರಿಗೆ ಈ ಕಟ್ಟಡದ ಇತಿಹಾಸದ ಕುರಿತಾಗಿ ಮಾಹಿತಿಯ ಕೊರತೆಯಿದೆ. ಇದರ ಮಹತ್ವ ಹಾಗೂ ಇತಿಹಾಸವನ್ನು ಜನರಿಗೆ ತಿಳಿಸುವ ಕಾರ್ಯವಾಗಬೇಕಾಗಿದೆ.

**ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆಯ ಕ್ರಮಗಳು**

ಭಾರತವು ಸಾವಿರಾರು ವರ್ಷಗಳ ವೈಭವಶಾಲಿ ಇತಿಹಾಸವನ್ನು ಹೊಂದಿದೆ. ಈ ಇತಿಹಾಸವನ್ನು ನಮ್ಮ ಮುಂದಿರಿಸುವ ಪ್ರಮುಖ ಸಾಕ್ಷಿಗಳು ಎಂದರೆ ಐತಿಹಾಸಿಕ ಸ್ಮಾರಕಗಳು. ದೇವಸ್ಥಾನಗಳು, ಕೋಟೆಗಳು, ಅರಮನೆಗಳು, ಗುಹೆಗಳು, ಮಸೀದಿಗಳು, ಚರ್ಚುಗಳು, ಶಾಸನಗಳು ಇವುಗಳೆಲ್ಲ ನಮ್ಮ ಸಂಸ್ಕೃತಿ ಮತ್ತು ಪರಂಪರೆಯ ಜೀವಂತ ನಿದರ್ಶನಗಳು. ಇವುಗಳನ್ನು ಕೇವಲ ಕಲ್ಲು-ಮಣ್ಣಿನ ಕಟ್ಟಡಗಳೆಂದು ನೋಡದೇ, ಭವಿಷ್ಯ ಪೀಳಿಗೆಗೆ ಹಸ್ತಾಂತರಿಸಬೇಕಾದ ಅಮೂಲ್ಯ ಪರಂಪರೆ ಎಂದು ಪರಿಗಣಿಸಬೇಕು.

**ಸಂರಕ್ಷಣೆ ಅಗತ್ಯತೆ**

- ಇತಿಹಾಸದ ಸಾಕ್ಷಿಗಳನ್ನು ಉಳಿಸಲು.
- ಭವಿಷ್ಯ ಪೀಳಿಗೆಯವರಿಗೆ ಸಂಸ್ಕೃತಿಯ ಪರಿಚಯ ಮಾಡಿಸಲು.
- ಪ್ರವಾಸೋದ್ಯಮವನ್ನು ಉತ್ತೇಜಿಸಿ ಆರ್ಥಿಕ ಅಭಿವೃದ್ಧಿಗೆ ಸಹಾಯ ಮಾಡಲು.
- ರಾಷ್ಟ್ರೀಯ ಹೆಮ್ಮೆ ಮತ್ತು ಏಕತೆಗೆ ಬಲ ನೀಡಲು.

**ಭೌತಿಕ ಸಂರಕ್ಷಣೆ ಕ್ರಮಗಳು**

- ಮುರಿದ ಭಾಗಗಳ ದುರಸ್ತಿ – ತಜ್ಞರಿಂದ ಮೂಲ ಶೈಲಿಗೆ ಹಾನಿಯಾಗದಂತೆ ದುರಸ್ತಿ.
- ನಿಯಮಿತ ಶುದ್ಧೀಕರಣ – ಕಲ್ಲಿನ ಮೇಲೆ ಪಾಚಿ, ಮಾಲಿನ್ಯ ತಡೆ.
- ರಾಸಾಯನಿಕ ಸಂರಕ್ಷಣೆ – ಚಿತ್ರಕಲೆ, ಶಾಸನ, ಕಲ್ಲುಗಳಿಗೆ ಸೂಕ್ತ ರಾಸಾಯನಿಕ ಬಳಕೆ.
- ಪರಿಸರ ನಿಯಂತ್ರಣ – ಮಳೆ, ಗಾಳಿ, ಮಾಲಿನ್ಯ ಇವುಗಳಿಂದ ಹಾನಿ ತಡೆ.
- ಸುರಕ್ಷತಾ ವ್ಯವಸ್ಥೆ – ಗಾರ್ಡ್‌ಗಳು, ಸಿಸಿಟಿವಿ, ಬೇಲಿಗಳ ಮೂಲಕ ರಕ್ಷಣೆ.

**ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂರಕ್ಷಣೆ ಕ್ರಮಗಳು**

- ಜನಜಾಗೃತಿ – ಶಾಲಾ, ಕಾಲೇಜು, ಮಾಧ್ಯಮಗಳ ಮೂಲಕ ಸ್ಮಾರಕಗಳ ಮಹತ್ವ ಸಾರುವುದು.
- ಕಾನೂನು ಕ್ರಮಗಳು – ಅಕ್ರಮ ಕಟ್ಟಡ ನಿರ್ಮಾಣ, ಗೋಡೆ ಮೇಲೆ ಬರೆಯುವಂತಹ ದುಷ್ಕೃತ್ಯಗಳ ವಿರುದ್ಧ ಕಠಿಣ ಕ್ರಮ.
- ಸಮುದಾಯ ಪಾಲ್ಗೊಳ್ಳಿಕೆ – ಸ್ಥಳೀಯ ಜನರು, ಎನ್‌ಜಿಒಗಳು, ಪ್ರವಾಸಿಗರು ಎಲ್ಲರೂ ಸೇರಿ ನೋಡಿಕೊಳ್ಳುವುದು.
- ಪ್ರವಾಸೋದ್ಯಮ ನಿರ್ವಹಣೆ – ನಿಯಂತ್ರಿತ ಪ್ರವಾಸಿಗರ ಪ್ರವೇಶ ಮತ್ತು ಮಾರ್ಗದರ್ಶಕರ ಮೂಲಕ

ಶಿಸ್ತಿನ ಭೇಟಿ.

**ಆಧುನಿಕ ತಂತ್ರಜ್ಞಾನ ಬಳಕೆ**

- ಡಿಜಿಟಲ್ ದಾಖಲಾತಿ – 3ಡಿ ಸ್ಕ್ಯಾನಿಂಗ್, ಡ್ರೋನ್ ಚಿತ್ರೀಕರಣ.
- ವಾಸ್ತವಿಕ ಮರುನಿರ್ಮಾಣ (Virtual Reconstruction) – ಹಾಳಾದ ಭಾಗಗಳನ್ನು ತಂತ್ರಜ್ಞಾನದಲ್ಲಿ ಪುನರ್‌ನಿರ್ಮಿಸಿ ಪ್ರದರ್ಶನ ಮಾಡುವುದು.
- ಆನ್‌ಲೈನ್ ಜ್ಞಾನ ಹಂಚಿಕೆ – ವೆಬ್‌ಸೈಟ್‌ಗಳು, ಮೊಬೈಲ್ ಆಪ್‌ಗಳ ಮೂಲಕ ಮಾಹಿತಿಯನ್ನು ಲಭ್ಯ ಮಾಡಿಸುವುದು.

**ಉಪಸಂಹಾರ**

ಒಟ್ಟಾರೆ ಐತಿಹಾಸಿಕವಾಗಿ ಜಮಖಂಡಿಯ ಸುತ್ತಮುತ್ತ ಅನೇಕ ಕಟ್ಟಡಗಳು ನಿರ್ಮಾಣವಾದವು, ದೇವಾಲಯಗಳು, ಅರಮನೆ, ಶಾಲೆಗಳು, ಸರ್ಕಾರಿ ಬಂಗ್ಲೆಗಳು ಸೇರಿದಂತೆ ಪ್ರಮುಖ ಕಟ್ಟಡಗಳು ಈ ಕಾಲದ ಸ್ಥಿತಿಗತಿಯನ್ನು ತಿಳಿಸುವಲ್ಲಿ ಪ್ರಮುಖ ಆಕರಗಳಾಗಿವೆ. ಕಟ್ಟಡಗಳು ಮನುಷ್ಯರ ಆವಾಸ ಸ್ಥಾನಗಳಾದ ಮೇಲೆ ಅವು ಮಾನವನ ಜೀವನ ಶೈಲಿಯಲ್ಲಾದ ಬದಲಾವಣೆಗಳನ್ನು ತಿಳಿಸುವಲ್ಲಿ ಬಹುಮುಖ್ಯ ಪಾತ್ರವಹಿಸುತ್ತವೆ. ಕಾಲ ಬದಲಾದಂತೆ ಮನುಷ್ಯನು ತನ್ನ ಅಗತ್ಯಕ್ಕೆ ತಕ್ಕಂತೆ ಪ್ರತ್ಯೇಕ ಕಟ್ಟಡಗಳನ್ನು ನಿರ್ಮಾಣ ಮಾಡಿಕೊಂಡ. ಅವು ಇಂದಿನ ದಿನದಲ್ಲಿ ಪ್ರಮುಖ ಸ್ಮಾರಕಗಳಾಗಿ ನಮಗೆ ದೊರೆಯುತ್ತವೆ. ಪ್ರತಿಯೊಂದು ಕಾಲಘಟ್ಟದ ಕಟ್ಟಡಗಳು ಆಯಾ ಕಾಲದ ವೈಭವವನ್ನು, ಸ್ಥಿತಿಗತಿಯನ್ನು ತಿಳಿಸುತ್ತವೆ. ಅಂತಹ ಕಟ್ಟಡಗಳ ಬಗ್ಗೆ ತಿಳಿಯುವ ಒಂದು ಸಣ್ಣ ಪ್ರಯತ್ನ ಈ ಲೇಖನದಲ್ಲಿ ಮಾಡಲಾಗಿದೆ.

**ಪರಾಮರ್ಶನ ಗ್ರಂಥಗಳು:**

1. ಬಿಜಾಪುರ ಜಿಲ್ಲಾ ಗೆಜೆಟ್. 1884.
2. ಬಿಜಾಪುರ ಜಿಲ್ಲಾ ಗೆಜೆಟ್. 1996.
3. ಬಿಜಾಪುರ ಜಿಲ್ಲಾ ಗೆಜೆಟ್. 1999.
4. ಕರ್ನಾಟಕ ಸ್ಟೇಟ್ ಗೆಜೆಟ್. 1984, 1985, 1994.
5. Gazetteer of India. 1975; Vol 3.
6. ಪಾಟೀಲ್ ಎಂ.ಎಸ್. ಜಮಖಂಡಿ ತಾಲೂಕಿನ ಇತಿಹಾಸ ಮತ್ತು ಪುರಾತತ್ವ.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.